ಪ್ರಜಾವಾಣಿ

**Friday, December 30, 2011**

# ಹೊಸ ವರ್ಷ ಆಚರಣೆ

ಜೈನ್ ಸಮೂಹ ಸಂಸ್ಥೆಯ ಖಗೋಳ ವಿದ್ಯಾರ್ಥಿಗಳ ಶೆರಟಾನ್ಸ್ ತಂಡವು ಇದೇ 31 ಹಾಗೂ ಜನವರಿ 1ರಂದು ಕನಕಪುರದ ಜೈನ್ ಗ್ಲೋಬಲ್ ಕ್ಯಾಂಪಸ್‌ನಲ್ಲಿ ಬಾಹ್ಯಾಕಾಶ ಸದಸ್ಯರೊಡನೆ ಹೊಸ ವರ್ಷ ಆಚರಿಸಲಿದೆ.

ಬಾಹ್ಯಾಕಾಶದಲ್ಲಿರುವ ಕೌತುಕದ ವಿಷಯಗಳನ್ನು ಸಾರ್ವಜನಿಕರಿಗೆ ತಿಳಿಸುವ ಮೂಲಕ ನೂತನ ವರ್ಷಾಚರಣೆಯ ಉದ್ದೇಶವಾಗಿದೆ.

ಸೌರವ್ಯೂಹದ ಗ್ರಹಗಳನ್ನು 7 ವಿಶಿಷ್ಟ ಟೆಲಿಸ್ಕೋಪ್ ಮೂಲಕ ತೋರುವುದರ ಜತೆಗೆ ಬಾಹ್ಯಾಕಾಶ ಛಾಯಾಗ್ರಾಹಕ ಕೀರ್ತಿಕುಮಾರ್ ಅವರು ಬಾಹ್ಯಾಕಾಶ ಛಾಯಾಗ್ರಹಣದ ಬಗ್ಗೆ ಉಪನ್ಯಾಸ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ: 98806 16000.